ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಗೃಹ ಇಲಾಖೆ

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡಪ್ರಭ    ದಿನಾಂಕ : DATE : 13/10/2019

# ಪರಂ ಪಿಎ ಆತ್ಮಹತ್ಯೆ!

## ಐಟಿ ಇಲಾಖೆ ದಾಳಿ ಕಾರಣ ಎಂದು ಬರೆದಿಟ್ಟು ನೇಣಿಗೆ ಶರಣು
## ಬೆಂಗಳೂರು ವಿವಿ ಆವರಣದಲ್ಲಿ ನೇಣು ಹಾಕಿಕೊಂಡ ರಮೇಶ್

• **ಕನ್ನಡಪ್ರಭ ವಾರ್ತೆ** ಬೆಂಗಳೂರು 13/10/19

ರಾಜ್ಯದ ಪ್ರಭಾವಿ ಕಾಂಗ್ರೆಸ್ ನಾಯಕ ಹಾಗೂ ಮಾಜಿ ಉಪಮುಖ್ಯಮಂತ್ರಿ ಡಾ। ಜಿ.ಪರಮೇಶ್ವರ್ ಮೇಲೆ ಆದಾಯ ತೆರಿಗೆ ಇಲಾಖೆ ದಾಳಿ ನಡೆಸಿದ ಬೆನ್ನಲ್ಲೇ ಅವರ ಆಪ್ತ ಸಹಾಯಕ ರಮೇಶ್ (40) ಶನಿವಾರ ಆತ್ಮಹತ್ಯೆಗೆ ಶರಣಾಗಿದ್ದು, ರಾಜಕೀಯ ಮತ್ತು ಸಾರ್ವಜನಿಕ ವಲಯದಲ್ಲಿ ಸಂಚಲನ ಉಂಟುಮಾಡಿದೆ.



ಆತ್ಮಹತ್ಯೆಗೂ ಮುನ್ನ ರಮೇಶ್ ಅವರು ಬರೆದಿದ್ದಾರೆ ಎನ್ನಲಾದ ಮರಣ ಪತ್ರದಲ್ಲಿ ಐಟಿ ದಾಳಿಯಿಂದ ಮರ್ಯಾದೆಗೆ ಅಂಜಿ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದಾಗಿ ಉಲ್ಲೇಖವಾಗಿದೆ. ಇತ್ತ ಮೃತನ ಕುಟುಂಬದವರು ರಮೇಶ್ ಅವರ ಸಾವಿಗೆ ಐಟಿ ಅಧಿಕಾರಿಗಳ ಕಿರುಕುಳ ಕಾರಣ ಎಂದು ಆರೋಪಿಸಿ ಜ್ಞಾನಭಾರತಿ ಪೊಲೀಸರಿಗೆ ದೂರು ನೀಡಿದ್ದಾರೆ. ↘ 5

### ರಮೇಶ್ ಆತ್ಮಹತ್ಯೆಗೆ ಮೊಬೈಲ್ ಕರೆ ರೆಕಾರ್ಡ್ ಕಾರಣ? ↘ 8

### ಡೆತ್‌ನೋಟ್‌ನಲ್ಲಿ ಏನಿದೆ?

1. ನನ್ನ ಮನೆಯಲ್ಲಿ ನಡೆದ ಐಟಿ ದಾಳಿಯಿಂದ ದಿಗ್ಭ್ರಾಂತನಾಗಿದ್ದೇನೆ. ನನಗೆ ತೆರಿಗೆ ಇಲಾಖೆ ಅಧಿಕಾರಿಗಳ ಪ್ರಶ್ನೆಗಳಿಗೆ ಉತ್ತರಿಸಲಾಗುತ್ತಿಲ್ಲ
2. ಮರ್ಯಾದೆಗೆ ಅಂಜಿ ನಾನು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೇನೆ. ಐಟಿ ಅಧಿಕಾರಿಗಳೇ, ನನ್ನ ಹೆಂಡತಿ-ಮಕ್ಕಳಿಗೆ ತೊಂದರೆ ಕೊಡಬೇಡಿ
3. ಪರಮೇಶ್ವರ್ ಸಾಹೇಬ್ರೇ, ಸ್ನೇಹಿತರೇ... ನಿಮ್ಮ ಕ್ಷಮೆ ಕೋರುತ್ತೇನೆ

### ರಮೇಶ್ ಕೊನೇ ಕ್ಷಣಗಳು...

- ಶನಿವಾರ ನಸುಕಿನ 2 ಗಂಟೆ ವರೆಗಿನ ಐಟಿ ದಾಳಿ ವೇಳೆ ಪರಂ ಜತೆಗೆ ಇದ್ದ ರಮೇಶ್. ಬೆಳಗ್ಗೆ 5 ಗಂಟೆಗೆ ಮನೆಗೆ ವಾಪಸ್. ವ್ಯಾಕುಲರಾಗಿದ್ದ ರಮೇಶ್: ಕುಟುಂಬಸ್ಥರು
- 8.30ರ ವೇಳೆಗೆ ಉಪಾಹಾರ ಸೇವಿಸಿ, ಸ್ವಲ್ಪ ಕೆಲಸವಿದೆ ಎಂದು ಹೊರಗೆ ತೆರಳಿದ್ದರು. ಬಳಿಕ ತಮ್ಮ ಆಪ್ತ ಸ್ನೇಹಿತರಿಗೆ ಕರೆ ಮಾಡಿ ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಹೇಳಿಕೆ
- 10.30ರ ವೇಳೆಗೆ ಬೆಂಗಳೂರು ವಿವಿಯ ಜ್ಞಾನಭಾರತಿ ಅರಣ್ಯ ಪ್ರದೇಶದಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆ

### ರಾಜಕೀಯ ದಾಳಿ ಅನ್ನಲ್ಲ ಎಂದ ಪರಂ: 'ಕೈ' ವಾದಕ್ಕೆ ಹಿನ್ನಡೆ



ಬೆಂಗಳೂರು: ಆದಾಯ ತೆರಿಗೆ ದಾಳಿಗೆ ರಾಜಕೀಯ ಬಣ್ಣವನ್ನು ನಾನು ಕಟ್ಟುವುದಿಲ್ಲ. ಐಟಿ ವಿಚಾರಣೆಗೆ ಸಹಕಾರ ನೀಡುತ್ತೇನೆ. ಅವರು ಸಂಗ್ರಹಿಸಿರುವ ದಾಖಲೆಗಳಿಗೆ ಸಮರ್ಪಕ ಸ್ಪಷ್ಟನೆ ನೀಡುತ್ತೇನೆ. ಮಂಗಳವಾರ ವಿಚಾರಣೆಗೆ ಕರೆದಿದ್ದು, ಅದಕ್ಕೆ ಹಾಜರಾಗುತ್ತೇನೆ... ಹೀಗಂತ ಹೇಳುವ ಮೂಲಕ ಮಾಜಿ ಕೆಪಿಸಿಸಿ ಅಧ್ಯಕ್ಷ ಡಾ.ಜಿ. ಪರಮೇಶ್ವರ್ ಅವರು ಐಟಿ ದಾಳಿ ರಾಜಕೀಯ ಪ್ರೇರಿತ ಎಂಬ ಕಾಂಗ್ರೆಸ್ ಪಕ್ಷ ನಿಲುವಿನಿಂದ ಅಂತರ ಕಾಯ್ದುಕೊಂಡಿದ್ದಾರೆ. ವಿವರ ↘ 8

11(a)

# ಪರಮೇಶ್ವರ್ ಪಿಎ ಆತ್ಮಹತ್ಯೆ!

ಕ.ಪ್ರ 13/10/19

◀ ಮೊದಲ ಪುಟದಿಂದ

ಬೆಂಗಳೂರು ವಿಶ್ವ ವಿದ್ಯಾಲಯದ ಜ್ಞಾನಭಾರತಿ ಆವರಣದ ಅರಣ್ಯ ಪ್ರದೇಶದಲ್ಲಿ ಮಧ್ಯಾಹ್ನ ಮರಕ್ಕೆ ರಮೇಶ್ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಕೆಲ ಹೊತ್ತಿನ ಬಳಿಕ ಮರದಲ್ಲಿ ಮೃತದೇಹ ನೋಡಿದ ಸಾರ್ವಜನಿಕರು ಪೊಲೀಸರಿಗೆ ತಿಳಿಸಿದ್ದಾರೆ. ಘಟನಾ ಸ್ಥಳಕ್ಕೆ ಆಗಮಿಸಿದ ಪೊಲೀಸರು ಪರಿಶೀಲಿಸಿದಾಗ ಮೃತದೇಹದ ಗುರುತು ಪತ್ತೆಯಾಗಿದೆ. ಈ ವಿಷಯ ತಿಳಿದ ಕೂಡಲೇ ಮಾಜಿ ಉಪಮುಖ್ಯಮಂತ್ರಿ ಪರಮೇಶ್ವರ್ ಹಾಗೂ ಮೃತನ ಕುಟುಂಬದವರು, ಸ್ನೇಹಿತರು ಹಾಗೂ ಬಂಧುಗಳು ಘಟನಾ ಸ್ಥಳಕ್ಕೆ ತೆರಳಿದರು. ಅಲ್ಲಿ ವಿಧಿ ವಿಜ್ಞಾನ ಪ್ರಯೋಗಾಲಯದ ತಜ್ಞರ ತಪಾಸಣೆ ಬಳಿಕ ಸಂಜೆ ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ವಿಕ್ಟೋರಿಯಾ ಆಸ್ಪತ್ರೆಗೆ ಪೊಲೀಸರು ಸಾಗಿಸಿದರು.

**ಎಂಟು ವರ್ಷದಿಂದ ಆಪ್ತ ಸಹಾಯಕ:** ರಾಮನಗರ ತಾಲೂಕಿನ ಮೇಳೆಹಳ್ಳಿ ಗ್ರಾಮದ ರಮೇಶ್ ಅವರು ಹನ್ನೆರಡು ವರ್ಷಗಳ ಹಿಂದೆ ಚನ್ನಪಟ್ಟಣ ತಾಲೂಕಿನ ಸೌಮ್ಯ ಜತೆ ವಿವಾಹವಾಗಿದ್ದರು. ಈ ದಂಪತಿಗೆ ಮೋಹಿತ್ (8) ಹಾಗೂ ಶ್ರೇಯಾ (6) ಎಂಬ ಮಕ್ಕಳಿದ್ದಾರೆ. ರಮೇಶ್ ಅವರಿಗೆ ಇಬ್ಬರು ಸೋದರಿಯರು ಮತ್ತು ಒರ್ವ ಸೋದರನಿದ್ದಾನೆ. ಪೋಷಕರು ರಾಮನಗರದ ಮೇಳೆಹಳ್ಳಿಯಲ್ಲಿ ನೆಲೆಸಿದ್ದಾರೆ. ತಮ್ಮ ಪತ್ನಿ ಸೌಮ್ಯ ಮತ್ತು ಇಬ್ಬರು ಮಕ್ಕಳ ಜತೆ ಜ್ಞಾನಭಾರತಿ ಸಮೀಪದ ಮುನಿಯಪ್ಪನಪಾಳ್ಯದಲ್ಲಿ ರಮೇಶ್ ವಾಸವಾಗಿದ್ದರು.

ಮೊದಲು ಪ್ರದೇಶ ಕಾಂಗ್ರೆಸ್ ಕಚೇರಿಯಲ್ಲಿ (ಕೆಪಿಸಿಸಿ) ಸಹಾಯಕರಾಗಿ ಕೆಲಸ ಮಾಡುತ್ತಿದ್ದ ರಮೇಶ್ ಅವರು ಪರಮೇಶ್ವರ್ ಅವರು ಕೆಪಿಸಿಸಿ ಅಧ್ಯಕ್ಷರಾದ ಬಳಿಕ ಅವರ ಆಪ್ತ ಸಹಾಯಕರಾದರು. ಉಪಮುಖ್ಯಮಂತ್ರಿಯಾದ ನಂತರ ಅವರ ಖಾಸಗಿ ಸಹಾಯಕರಾಗಿ ಮುಂದುವರೆದಿದ್ದರು. ಹೀಗೆ ಎಂಟು ವರ್ಷಗಳಿಂದ ಪರಮೇಶ್ವರ್ ಅವರ ಆಪ್ತ ಸಹಾಯಕರಾಗಿ ಕೆಲಸ ಮಾಡುತ್ತಿದ್ದರು.



ರಮೇಶ್ ಆತ್ಮಹತ್ಯೆ ಮಾಡಿಕೊಂಡ ಸ್ಥಳದಲ್ಲಿ ಕುಟುಂಬಸ್ಥರಿಗೆ ಪರಮೇಶ್ವರ ಸಾಂತ್ವನ

ಗುರುವಾರ ಐಟಿ ಅಧಿಕಾರಿಗಳು ದಾಳಿ ನಡೆಸಿದ್ದಾಗಲೂ ಸಹ ಪರಮೇಶ್ವರ್ ಜತೆ ರಮೇಶ್ ಇದ್ದರು. ಎಂದಿನಂತೆ ಗುರುವಾರ ಬೆಳಗ್ಗೆ ಸಾಹೇಬ್ರ (ಪರಮೇಶ್ವರ್) ಮನೆಗೆ ಕೆಲಸಕ್ಕೆ ಹೋಗಬೇಕು ಎಂದು ಹೇಳಿಯೇ ರಮೇಶ್ ಹೊರಟಿದ್ದರು. ಅಂದು ಐಟಿ ಅಧಿಕಾರಿಗಳು ಕೊರಟಗೆರೆ ಪಟ್ಟಣದಲ್ಲಿದ್ದ ಪರಮೇಶ್ವರ್ ಅವರನ್ನು ವಿಚಾರಣೆ ಸಲುವಾಗಿ ಬೆಂಗಳೂರಿಗೆ ಕರೆ ತಂದಿದ್ದರು. ಆಗ ಅವರೊಂದಿಗೆ ರಮೇಶ್ ಕೂಡ ಇದ್ದರು. ಇದಾದ ಬಳಿಕ ಐಟಿ ದಾಳಿ ಮುಗಿಯುವ ಎರಡು ದಿನಗಳವರೆಗೆ ಪರಮೇಶ್ವರ್ ಮನೆಯಲ್ಲೇ ರಮೇಶ್ ಇದ್ದರು. ಶನಿವಾರ ನಸುಕಿನಲ್ಲಿ ದಾಳಿ ಪ್ರಕ್ರಿಯೆ ಮುಗಿಸಿ ಅಧಿಕಾರಿಗಳು ತೆರಳಿದ ನಂತರ ಅವರು ಬೆಳಗ್ಗೆ 5 ಗಂಟೆ ಹೊತ್ತಿಗೆ ತಮ್ಮ ಮನೆಗೆ ಮರಳಿದ್ದರು ಎಂದು ಕುಟುಂಬದ ಸದಸ್ಯರು ಹೇಳಿದ್ದಾರೆ. ಮನೆಗೆ ಬಂದಾಗ ರಮೇಶ್ ತುಂಬಾ ವ್ಯಾಕುಲರಾಗಿದ್ದರು. ಈ ವೇಳೆ ಕೆಲವು ಸ್ನೇಹಿತರು ಹಾಗೂ ಸಂಬಂಧಿಕರು ಸಹ ರಮೇಶ್ ಅವರ ಮನೆಗೆ ಬಂದು ಕುಶಲೋಪರಿ ವಿಚಾರಿಸಿ ಹೋಗಿದ್ದರು. ಬಳಿಕ 8.30ರ ಸುಮಾರಿಗೆ ಉಪಾಹಾರ ಸೇವಿಸಿದ ರಮೇಶ್, ಸ್ವಲ್ಪ ಹೊರಗೆ ಕೆಲಸವಿದೆ. ಹೋಗಿ ಬರುತ್ತೇನೆ ಎಂದು ಪತ್ನಿಗೆ ಹೇಳಿ ಹೊರಟಿದ್ದರು. ಮನೆಯಿಂದ ಹೊರಟ ಕೆಲ ಹೊತ್ತಿನ ಬಳಿಕ ತಮ್ಮ ಆಪ್ತ ಸ್ನೇಹಿತರಿಗೆ ಕರೆ ಮಾಡಿದ ರಮೇಶ್, 'ನನಗೆ ಬದುಕು ಸಾಕಾಗಿದೆ. ಐಟಿ ದಾಳಿಯಿಂದ ಮರ್ಯಾದೆ ಹೋಯಿತು. ನಾನು ಜ್ಞಾನಭಾರತಿ ಕಾಡಿನಲ್ಲಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೇನೆ' ಎಂದು ಹೇಳಿ ಕರೆ ಸ್ಥಗಿತಗೊಳಿಸಿದ್ದಾರೆ. ಬಳಿಕ ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣಕ್ಕೆ ಬಂದ ರಮೇಶ್, ರಾಷ್ಟ್ರೀಯ ಕ್ರೀಡಾ ಪ್ರಾಧಿಕಾರ (ಸಾಯ್) ಕಡೆ ಸಾಗುವ ಮಾರ್ಗದಲ್ಲಿ ಕಾರು ನಿಲ್ಲಿಸಿದ್ದಾರೆ. ಕೆಲ ನಿಮಿಷ ಕಾರಿನಲ್ಲೇ ಕುಳಿತು ಡೆತ್ ನೋಟ್ ಬರೆದ ಅವರು, ಮುಂಬದಿಯ ಸೀಟಿನಲ್ಲಿ ಡೆತ್ ನೋಟ್ ಇಟ್ಟು ಕೆಳಗೆ ಇಳಿದಿದ್ದಾರೆ.

ನಂತರ ಸಾಯ್ ಆವರಣಕ್ಕೆ ಹೊಂದಿಕೊಂಡಂತಿರುವ ನಿರ್ಜನ ಕಾಡಿನಲ್ಲಿ ಮರಕ್ಕೆ ನೇಣಿಗೆ ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾರೆ. ಇತ್ತ ರಮೇಶ್ ಅವರನ್ನು ಸಂಪರ್ಕಿಸಲು ಸ್ನೇಹಿತರು ಯತ್ನಿಸಿದರೂ ಪ್ರಯೋಜನವಾಗಿಲ್ಲ. ಅವರ ಮೊಬೈಲ್ ಸ್ವಿಚ್ಡ್ ಆಫ್ ಆಗಿತ್ತು. ಇದರಿಂದ ಆತಂಕಗೊಂಡ ಮೃತನ ಸ್ನೇಹಿತರು, ಪೊಲೀಸರು ಹಾಗೂ ಪರಮೇಶ್ವರ್ ಅವರಿಗೆ ವಿಷಯ ತಿಳಿಸಿದ್ದಾರೆ.

ಕೂಡಲೇ ಪೊಲೀಸರು ರಮೇಶ್ ಅವರ ಮೊಬೈಲ್ ಇರುವ ಟವರ್ ಲೋಕೇಷನ್ ಮೂಲಕ ಪತ್ತೆ ಕಾರ್ಯಾಚರಣೆ ಆರಂಭಿಸಿದ್ದಾರೆ. ಆ ವೇಳೆ ಅವರ ಮೊಬೈಲ್ ಕೊನೆ ಬಾರಿಗೆ ಜ್ಞಾನಭಾರತಿ ಟವರ್‌ನಿಂದ ಸಂಪರ್ಕ ಪಡೆದಿದ್ದು ಗೊತ್ತಾಗಿದೆ. ಈ ಮಾಹಿತಿ ತಿಳಿದ ಜ್ಞಾನಭಾರತಿ ಪೊಲೀಸರು ವಿವಿ ಆವರಣದಲ್ಲಿ ಹುಡುಕಾಟ ನಡೆಸಿದ್ದಾರೆ. ಆಗ ರಾಷ್ಟ್ರೀಯ ಕ್ರೀಡಾ ಪ್ರಾಧಿಕಾರದ ರಸ್ತೆಯಲ್ಲಿ ಅವರ ಕಾರು ಕಂಡಿದೆ. ಬಳಿಕ ಅಲ್ಲೇ ಹುಡುಕಾಡಿದಾಗ ಸಾರ್ವಜನಿಕರೊಬ್ಬರು ಮರದಲ್ಲಿ ಯಾರೋ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ತಿಳಿಸಿದ್ದಾರೆ. ಕೂಡಲೇ ಸ್ಥಳಕ್ಕೆ ತೆರಳಿದ ಪೊಲೀಸರು, ಮೃತನ ಕುಟುಂಬದ ಸದಸ್ಯರನ್ನು ಕರೆಸಿಕೊಂಡು ಪರಿಶೀಲಿಸಿದಾಗ ಮೃತದೇಹದ ಗುರುತು ಗೊತ್ತಾಯಿತು ಎಂದು ಅಧಿಕಾರಿಗಳು ವಿವರಿಸಿದ್ದಾರೆ.

## ರಮೇಶ್ ಹುಟ್ಟೂರಲ್ಲಿ ಮೌನ

ರಾಮನಗರ: ಮಾಜಿ ಉಪಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ್ ಆಪ್ತ ಸಹಾಯಕ ರಮೇಶ್ ಸಾವಿನ ಸುದ್ದಿ ತಿಳಿಯುತ್ತಿದ್ದಂತೆ ಅವರ ಹುಟ್ಟೂರಾದ ರಾಮನಗರ ತಾಲೂಕಿನ



ಮೇಳೇಹಳ್ಳಿ ಗ್ರಾಮದಲ್ಲಿ ನೀರವ ಮೌನ ಆವರಿಸಿದೆ. ಒಂದೆಡೆ ರಮೇಶ್ ಆತ್ಮಹತ್ಯೆಗೆ ಶರಣಾಗಿದ್ದರೆ, ಇನ್ನೊಂದೆಡೆ ಅವರ ಪೋಷಕರು ಸಂಬಂಧಿಕರೊಬ್ಬರ ತಿಥಿ ಕಾರ್ಯಕ್ಕಾಗಿ ಬೇರೆ ಊರಿಗೆ ತೆರಳಿದ್ದರು. ಅಲ್ಲಿ ಮಗನ ಸಾವಿನ ಸುದ್ದಿ ತಿಳಿಯುತ್ತಿದ್ದಂತೆ ಊರಿಗೆ ಮರಳಿದ್ದಾರೆ. ತಂದೆ ಸಂಪಗಯ್ಯ ಅಸ್ವಸ್ಥಗೊಂಡು ಕುಸಿದು ಬಿದ್ದಿದ್ದಾರೆ. ತಕ್ಷಣ ಸಂಬಂಧಿಕರು ಆರೈಕೆ ಮಾಡಿದರು. ತಾಯಿ ಸಾವಿತ್ರಮ್ಮ, ಪತ್ನಿ ಸೌಮ್ಯ, ಸಹೋದರಿಯರಾದ ಪದ್ಮ ಮತ್ತು ಲಕ್ಷ್ಮೀದೇವಿ ಹಾಗೂ ಸಂಬಂಧಿಕರ ಆಕ್ರಂದನ ಮುಗಿಲು ಮುಟ್ಟಿತ್ತು. ಮೃತ ರಮೇಶ್ ಅವರ ಮೃತದೇಹ ಹುಟ್ಟೂರಾದ ಮೇಳೇಹಳ್ಳಿ ಗ್ರಾಮದಲ್ಲಿರಿಸಿ ಕುಟುಂಬಸ್ಥರು ಮತ್ತು ಸ್ನೇಹಿತರಿಗೆ ಅಂತಿಮ ದರ್ಶನಕ್ಕೆ ಅವಕಾಶ ಕಲ್ಪಿಸಲು ಸಿದ್ಧತೆಗಳು ನಡೆದಿವೆ. ಭಾನುವಾರ ಮಧ್ಯಾಹ್ನದ ವೇಳೆಗೆ ಹಿಂದೂ ಸಂಪ್ರದಾಯದಂತೆ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.